# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

**ಸಿ.ಸಿ. 1518/2022**

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಚಾಂದಿನಿ ಎಸ್ ಎನ್ |
| ಗಂಡನ ಹೆಸರು | - | ನಯನಕುಮಾರ |
| ವಯಸ್ಸು | - | 32 ವರ್ಷ |
| ಕೆಲಸ | - | ಗೃಹಿನಿ |
| ವಾಸ | - | ಸಾಲೀಗ್ರಾಮ |

**ದಿನಾಂಕ 22-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ನನ್ನ ತಾಯಿ. ಚಾಸಾ 3 ನನ್ನ ಚಿಕ್ಕಮ್ಮ. ಚಾಸಾ 4 ನನ್ನ ಚಿಕ್ಕಪ್ಪ. ಚಾಸಾ 5 ನನ್ನ ತಮ್ಮ ಚಾಸಾ 6 ಮತ್ತು 7 ನಮ್ಮ ಗ್ರಾಮಸ್ಥರು. ಆರೊಪಿತರು ಪರಿಚಯ ಇದೆ. ಜಮೀನಿನ ವಿಚಾರವಾಗಿ ದಿಃ 18-04-2022 ರಂದು ಮದ್ಯಾಹ್ನ 1.30 ಗಂಟೆ ಸಮಯಕ್ಕೆ ಸ ನಂ. 24/2 ರಿಂದ 24/8 ರಲ್ಲಿ 1 ಎಕರೆ 25 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಚಿಕ್ಕನಾಯಕನ ಹಳ್ಳಿ ಗ್ರಾಮದ ಜಮೀನಿನ ಬಳಿ ನಾನು, ಹಾಗೂ ಚಾಸಾ 2 ಮತ್ತು 3 ರವರು ಇದ್ದಾಗ 1 ನೇ ಆರೋಪಿ ನವೀ ನಕುಮಾರ ಪಕ್ಕದ ಜಮೀನಿನವರಾಗಿದ್ದು ಅಲ್ಲಿಗೆ ಬಂದು ನಮ್ಮ ಜಮೀನು ಜಂಟಿಯಾಗಿದ್ದು, ಅದನ್ನು ಪ್ರತ್ಯೇಕವಾಗಿ ಮಾಡಿಕೊಡಿ ಎಂದು ನಾವು ಕೇಳಿದ್ದಕ್ಕೆ ಆರೋಪ 1 ಮತ್ತು 2 ರವರು ಸ್ಥಳದಲ್ಲಿ ಇದ್ದು 2 ನೇ ಆರೋಪಿ ನನಗೆ ಪಿಕಾಸಿಯನ್ನು ತೆಗೆದುಕೊಂಡು ಬಂದು ನನ್ನನ್ನು ಸಾಯಿಸುತೆತೇನೆ ಎಂದು ಹೊಡಯಲು ಬಂದಿರುತ್ತಾರೆ.

ನಂತರ 1 ನೇ  ಆರೋಪಿ ನವೀನಕುಮಾರ ನನಗೆ ಕೆಟ್ಟ ಪದಗಳಿಂದ ಅವಾಚ್ಯ ಶಬ್ದಗಳಿಂದ ವೇವರಸಿಮುಂಡೆ ಎಂದು ಬೈದಿರುತ್ತಾರೆ. ನಂತರ 1 ನೇ ಆರೋಪಿ ನನ್ನನ್ನು ಎಳೆದಾಡಿ ಕೆಳಕ್ಕೆ ಬೀಳಿಸಿರುತ್ತಾರೆ. ಬಿದ್ದ ಸ್ಥಳದಲ್ಲಿ ಕಲ್ಲು ಇದ್ದ ಕಾರಣ  ನನ್ನ ಸೊಂಟಕ್ಕೆ ಪೆಟ್ಟು  ಬಿದ್ದಿರುತ್ತದೆ.  ನಂತರ ಚಾಸಾ 4 ಮತ್ತು 5 ರವರಿಗೆ   ಚಾಸಾ 3 ರವರು ದೂರವಾಣಿ ಕರೆ ಮಾಡಿ ಕರೆದಿದ್ದು  ಅವರು ಸ್ಥಳಕ್ಕೆ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದ ನಂತರ ಅದೇ ದಿನ ಸಂಜೆ 4.00 ಗಂಟೆ ಸಮಯದಲ್ಲಿ  ಸಾಲೀಗ್ರಾಮ  ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ.

ನಾನು ದೂರನ್ನು ಕೊಟ್ಟ ನಂತರ ದಿಃ 19-04-2021 ರಂದು ಬೆಳಿಗ್ಗೆ 11.00  ಗಂಟೆ ಸ್ಥಳಕ್ಕೆ ಬಂದು ನಾನು ತೋರಿಸಿದ  ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಗಲಾಟೆಯಾದ ಕುರಿತು ಮಾಹಿತಿಯನ್ನು ಪಡೆದುಕೂಂಡು ಪಂಚನಾಮೆಯನ್ನು ಬರೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು, ಚಾಸಾ 6 ಮತ್ತು 7 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ತೋರಿಸಿದ ದಾಖಲೆಯ ಮೇಲೆ ತಮ್ಮ ಸಹಿ ಇರುವುದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ 1 ಎಂದು ಹಾಗೂ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.  ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು  ದಾಖಲೆಯ ಮೇಲೆ ತಮ್ಮ ಸಹಿ ಇರುವುದನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳಮಹಜರ ಆಗಿದ್ದು ಅದನ್ನು  ನಿಪಿ 2 ಎಂದು ಹಾಗೂ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.  ಸಾಕ್ಷಿ  ನ್ಯಾಯಾಲಯದ ಮುಂದೆ ಇರುವ ಒಂದು ಪಿಕಾಸಿಯನ್ನು ನೋಡಿ ಗುರುತಿಸಿದ್ದು ಅದನ್ನು ಎಮ್ ಒ 1 ಎಂದು ಗುರುತಿಸಲಾಯಿತು.

ನಾನು ಈಗಾಗಲೇ  ದಿ 05-10-2022 ರಂದು  ನ್ಯಾಯಾಲಯಕ್ಕೆ ಹಾಜರಾಗಿ ನನ್ನ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು  ಸಾಕ್ಷಿಯ ಸ್ವಯಂ ಕೃತ ಹೇಳಿಕೆಯಾಗಿದ್ದು  ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು  ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**<u>ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ</u>**

ನಾನು ದೂರಿನಲ್ಲಿ ಚಿಕ್ಕನಾಯಕನಹಳ್ಳಿ ಗ್ರಾಮದಲ್ಲಿರುವ ಸ ನಂ. 24/2 ರಿಂದ 24/8 ರಲ್ಲಿರುವ 1 ಎಕರೆ 25 ಗುಂಟೆ ಜಮೀದಿಗೆ ಸಂಬಂಧಪಟ್ಟಂತೆ ಈ ವಿಚಾರವನ್ನು ಗ್ರಾಮಸ್ಥರ ಸಮಕ್ಷಮ ವಿಭಾಗ ಮಾಡಿಕೊಳ್ಳುವಂತೆ ಒಪ್ಪಂದ ಮಾಡಿಕೂಂಡಿರುತ್ತೇವೆ ಎಂದರೆ ಸರಿ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೇ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ